ಅವರು ಭರತನಾಟ್ಯ ತರಗತಿಗಳನ್ನೂ ನಡೆಸುತ್ತಿದ್ದರು. ಹಾಗಾಗಿ ನಾನು ಕ್ಷಿಪ್ರವಾಗಿ ಆ ತರಗತಿಗೆ ಸೇರಿಕೊಂಡು ಭರತನಾಟ್ಯ ಕಲಿಕೆಯನ್ನು ಆರಂಭಿಸಿಯೇಬಿಟ್ಟೆ.

◆ **ನಿಮ್ಮ ಜೀವನದಲ್ಲಿ ಭಾಷೆ ಎಂಬುದು ಒಂದು ಸವಾಲು ಎನಿಸುತ್ತದೆಯೇ? ಇಟಲಿಯ ಭಾಷೆ, ಚೆನ್ನೈಯಲ್ಲಿ ತಮಿಳು ಕಲಿಕೆ, ಕಾಲೇಜಿನಲ್ಲಿ ಸಂಸ್ಕೃತ ಕಲಿಕೆ – ಹೀಗೆ ನಿಮ್ಮ ಪ್ರಯತ್ನ ವಿಸ್ತಾರವಾದುದು ಅನಿಸುತ್ತದೆ.**

ನನಗೆ ಭಾರತೀಯ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದು ದೊಡ್ಡ ಸಮಸ್ಯೆಯೇನೂ ಆಗಲಿಲ್ಲ. ಯಾಕೆಂದರೆ ಇಟಲಿಯಲ್ಲಿ ಇಂಗ್ಲಿಷ್ ಹೆಚ್ಚು ಜನಪ್ರಿಯ ಭಾಷೆಯಲ್ಲ. ಭಾರತದಲ್ಲಿ ಹಲವು ಭಾಷೆಗಳಿರುವುದರಿಂದ ಜನರು ಇನ್ನೊಂದು ಭಾಷೆಯನ್ನು ಅರ್ಥಮಾಡಿಕೊಳ್ಳಲು ಸ್ವಲ್ಪವಾದರೂ ಹೆಚ್ಚುವರಿ ಪ್ರಯತ್ನ ಮಾಡಲೇಬೇಕು. ಅದೇ ಮಾದರಿಯ ಪ್ರಯತ್ನವನ್ನು ನಾನೂ ಮಾಡುತ್ತಿದ್ದೇನಷ್ಟೆ. ನಾನು ವಿದೇಶಿ ಮಹಿಳೆ ಎಂಬ ಕಾರಣಕ್ಕೆ ಹೆಚ್ಚುವರಿ ಸಮಸ್ಯೆಯೇನೂ ಆಗಲಿಲ್ಲ. ಅಲ್ಲದೆ ಸ್ನಾತಕೋತ್ತರ ಪದವಿಯಲ್ಲಿ ಸಂಸ್ಕೃತ ಭಾಷೆ ಅಭ್ಯಾಸ ಮಾಡಿದ್ದರಿಂದ ಮತ್ತು ನನ್ನ ಡೆಸರ್ಟೇಷನ್ ವಿಷಯವು, 'ಮಹಾಭಾರತ' ಆಗಿರುವುದರಿಂದ ನಾನು ಇಲ್ಲಿನ ಪೌರಾಣಿಕ ಕಥೆಗಳನ್ನು ಸುಲಭವಾಗಿ ಅರ್ಥ ಮಾಡಿಕೊಂಡಿದ್ದೇನೆ. ಭಾಷೆ ಎಂದರೆ ಕೇವಲ ನಾವು ವ್ಯವಹರಿಸುವ ಮಾಧ್ಯಮವಷ್ಟೇ ಅಲ್ಲ. ಇಲ್ಲಿನ ಕಲಾಪ್ರಕಾರಗಳೂ ಏನೋ ಒಂದನ್ನು ಸಂವಹನ ಮಾಡುತ್ತವಲ್ಲ! ಅದನ್ನು ನಾನು ಅರ್ಥೈಸಿಕೊಳ್ಳಬಲ್ಲವಳಾಗಿದ್ದೇನೆ. ಸಂಸ್ಕೃತದಲ್ಲಿ ತುಸು ಓದಲು ಬರುತ್ತದೆ. ಶ್ಲೋಕಗಳನ್ನು ಅರ್ಥಮಾಡಿಕೊಳ್ಳಲು ನನಗೆ ಕಷ್ಟವಾಗುವುದಿಲ್ಲ. ತಮಿಳುನಾಡಿನಲ್ಲಿಯೇ ಕಳೆದ ಇಪ್ಪತ್ತು ವರ್ಷಗಳಿಂದ ಓಡಾಡುತ್ತ ತಮಿಳು ಚೆನ್ನಾಗಿ ಮಾತನಾಡಲು, ತಕ್ಕಮಟ್ಟಿಗೆ ಓದಲು ಬರೆಯಲು ಕಲಿತಿರುವೆ. ಭರತನಾಟ್ಯಕ್ಕೆ ಸಂಬಂಧಿಸಿದ ಸಾಹಿತ್ಯದ ಅರ್ಥವನ್ನು ತಜ್ಞರಿಂದ ಕೇಳಿ ತಿಳಿದು ಕಲಿತುಕೊಳ್ಳುತ್ತೇನೆ. ಈ ನಿರಂತರ ಪ್ರಯತ್ನವು ನನ್ನನ್ನು ಹೆಚ್ಚು ಅಪ್‌ಡೇಟ್ ಆಗಿ ಇರುವಂತೆ ಮಾಡಿದೆ. ಅಲ್ಲದೆ ಎಲ್ಲಿಯೂ ನಾನು ಉದಾಸೀನ ತೋರದಂತೆ ನನ್ನನ್ನು ಎಚ್ಚರಿಸುತ್ತಿರುತ್ತದೆ.



◆ **ನಿಮ್ಮ ಜೀವನವನ್ನು ಪರಿವರ್ತಿಸಿದ ಸಂದರ್ಭ ಯಾವುದು?**

ಮಹಾಭಾರತದ ಅಧ್ಯಯನಕ್ಕಾಗಿ ನಾನು ಆರಂಭದಲ್ಲಿ ಚೆನ್ನೈ ಕಲಾಕ್ಷೇತ್ರಕ್ಕೆ ಬಂದಾಗ, ಅಡೆಯಾರ್ ಲಕ್ಷ್ಮಣ್ ಅವರು ನನಗೆ ಗುರುವಾಗಿ ದೊರಕಿದ್ದು ನನ್ನ ಬದುಕಿನ ಬಹುದೊಡ್ಡ ತಿರುವು ಎನ್ನಬೇಕು. ಅವರ ಬಳಿ ಭರತನಾಟ್ಯ ಕಲಿಯಲು ಆರಂಭಿಸಿದಾಗ ದೇಹ, ಮನಸ್ಸು ಮತ್ತು ಆತ್ಮವು ಏಕಾಗ್ರತೆಯೊಂದಿಗೆ ನೃತ್ಯದಲ್ಲಿ ಸ್ಥಾಪನೆಯಾಗಬೇಕು ಎಂದು ಅರಿತೆ. ಹತ್ತು ವರ್ಷ ನಿರಂತರ ಪಾಠ ಹೇಳಿಸಿಕೊಂಡಿದ್ದೇನೆ. ನಾನು ದಿನದ ಇಪ್ಪತ್ತನಾಲ್ಕು ಗಂಟೆಯೂ ನೃತ್ಯವನ್ನೇ ಉಸಿರಾಡುತ್ತಿದ್ದೆ. ಅಂದರೆ ಬೆಳಿಗ್ಗೆ ಒಂದಿಷ್ಟು ಹೊತ್ತು ನೃತ್ಯ ತರಗತಿಯಾದ